**ಭಾರತೀಯ ವೈದ್ಯಕೀಯ ಸಂಘ – ಕರ್ನಾಟಕ ರಾಜ್ಯ ಶಾಖೆ**

ಕನ್ನಡ ವೈದ್ಯ ಬರಹಗಾರರ ಸಮಿತಿ

ದತ್ತಿನಿಧಿ ಉಪನ್ಯಾಸ ಮಾಲೆಯ ವಿವರಗಳು ಮತ್ತು ನಿಯಮಾವಳಿಗಳು

ನಿಯಮಗಳನ್ನು ಬದಲಾವಣೆ ಮಾಡುವ ಅಧಿಕಾರವನ್ನು ಸಮಿತಿಯು ಹೊಂದಿರುತ್ತದೆ. ಸಮಿತಿಯ ತೀರ್ಮಾನವೇ ಅಂತಿಮ.


| | | |
|---|---|---|
| ೧ | ದತ್ತಿ ಉಪನ್ಯಾಸದ ಹಿನ್ನೆಲೆ | ೨ |
| ೨ | ದತ್ತಿನಿಧಿಯ ವ್ಯಾಖ್ಯೆ | ೨ |
| ೩ | ದತ್ತಿನಿಧಿ ಸ್ಥಾಪನೆ | ೨ |
| ೪ | ದತ್ತಿನಿಧಿ ಇಡುಗಂಟು | ೩ |
| ೫ | ದತ್ತಿನಿಧಿ ಸ್ವೀಕಾರ | ೪ |
| ೬ | ದತ್ತಿನಿಧಿ ನಿರ್ವಹಣೆ | ೪ |
| ೭ | ಆದಾಯ ತೆರಿಗೆ ವಿನಾಯತಿ | ೪ |
| ೮ | ಉಪನ್ಯಾಸದ ಸ್ಥಳ | ೪ |
| ೯ | ಸಂಘಸಂಸ್ಥೆಗಳ ಸಹಯೋಗ | ೪ |
| ೧೦ | ಉಪನ್ಯಾಸದ ವಿಷಯ | ೪ |
| ೧೧ | ಉಪನ್ಯಾಸಕರ ಆಯ್ಕೆ | ೫ |
| ೧೨ | ಉಪನ್ಯಾಸದ ದಿನಾಂಕ | ೫ |
| ೧೩ | ಉಪನ್ಯಾಸ ವಿವರಗಳು | ೫ |
| ೧೪ | ಉಪನ್ಯಾಸಕರಿಗೆ ಗೌರವ | ೬ |
| ೧೫ | ಆರ್ಥಿಕ ನೆರವು | ೬ |
| ೧೬ | ದತ್ತಿ ಉಪನ್ಯಾಸ ಗ್ರಂಥ | ೬ |
| ೧೭ | ಮಾದರಿ ಆಹ್ವಾನ ಪತ್ರಿಕೆ ಮತ್ತು ಗೌರವ ಪತ್ರ | ೭ |


DRAFT

| | | |
|---|---|---|
| ೦೧ | ದತ್ತಿ ಉಪನ್ಯಾಸ ಹಿನ್ನೆಲೆ | • ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ರಾಜ್ಯಶಾಖೆಯ ಕನ್ನಡ ವೈದ್ಯ ಬರಹಗಾರರ ಬಳಗವು ವೃತ್ತಿಪರರ ಸಂಘಟನೆಯಾಗಿದೆ.<br>• 'ಮಾ ದುಃಖಭಾಗ್ ಭವೇತ್' – ನಮ್ಮ ಸಮಾಜದಲ್ಲಿ ಯಾರೂ ಅನಾರೋಗ್ಯ ಪೀಡಿತರಾಗಿ ದುಃಖಿಗಳಾಗಬಾರದು ಎನ್ನುವುದು ನಮ್ಮ ಆಶಯ.<br>• 'ನಹಿ ಜ್ಞಾನೇನ ಸದೃಶಂ' – ಜ್ಞಾನಕ್ಕಿಂತ ಮಿಗಿಲಾದದ್ದು ಮತ್ತೊಂದಿಲ್ಲ. ಒಂದು ರೋಗವನ್ನು ಗುಣಪಡಿಸುವುದಕ್ಕಿಂತ, ಆ ರೋಗವು ಬರದ ಹಾಗೆ, ಬಂದರೂ ಮರುಕಳಿಸದ ಹಾಗೆ ತಡೆಗಟ್ಟುವ ಅರಿವು ಬಹಳ ಮುಖ್ಯ.<br>• ಅಸ್ವಸ್ಥತೆಯನ್ನು ತಡೆಗಟ್ಟುವ ಮಂಗಳಮಯವಾದ ಜ್ಞಾನವನ್ನು ಪಸರಿಸುವುದು ಪ್ರತಿಯೊಬ್ಬ ವೈದ್ಯನ ಕರ್ತವ್ಯ ಮತ್ತು ಧರ್ಮ. ಇದನ್ನು ಕಾರ್ಯರೂಪಕ್ಕೆ ತರುವುದು ಬಳಗದ ಆಶಯ<br>• ಪ್ರಸ್ತುತ ಜ್ಞಾನಪ್ರಸಾರವನ್ನು ಉಪನ್ಯಾಸ-ಪ್ರಶ್ನೋತ್ತರ ಮೂಲಕ ಹರಡುವುದು ನಮ್ಮ ಬಳಗದ ತಕ್ಷಣದ ಉದ್ದೇಶವಾಗಿದೆ. |
| ೦೨ | ದತ್ತಿನಿಧಿಯ ವ್ಯಾಖ್ಯೆ | ಉಪನ್ಯಾಸಗಳ ಮೂಲಕ ಮಂಗಳಮಯವಾದ ಆರೋಗ್ಯ ಜ್ಞಾನಪ್ರಸಾರದಲ್ಲಿ ಭಾಗಿಯಾಗಲು ಅಗತ್ಯವಾದ ಮೂಲ ಇಡುಗಂಟೇ ದತ್ತಿನಿಧಿ. |
| ೦೩ | ದತ್ತಿನಿಧಿ ಸ್ಥಾಪನೆ | • ದತ್ತಿ ಉಪನ್ಯಾಸವನ್ನು ಸ್ಥಾಪಿಸಲು ಭಾರತೀಯ ವೈದ್ಯಕೀಯ ಸಂಘದ ಎಲ್ಲ ಸದಸ್ಯರಿಗೆ ಅವಕಾಶವಿದೆ. ಅದು ಅವರ ಹಕ್ಕು ಮತ್ತು ಧರ್ಮ.<br>• ದತ್ತಿಯನ್ನು ತಮ್ಮ ಹೆಸರಿನಲ್ಲಿ ಅಥವ ತಮ್ಮ ಹಿರಿಯರ ಇಲ್ಲವೇ ಪ್ರೀತಿಪಾತ್ರರ ಹೆಸರಿನಲ್ಲಿಡಬಹುದು.<br>• ದತ್ತಿಯನ್ನು ತಮ್ಮ ತಜ್ಞ ಕ್ಷೇತ್ರಕ್ಕೆ ಅನುಗುಣವಾಗಿ ಸ್ಥಾಪಿಸಬಹುದು. ಉದಾ: ಮಕ್ಕಳ ಆರೋಗ್ಯ,<br>• ದತ್ತಿಯನ್ನು ಆಯಾ ದಿನಾಚರಣೆಯ ಅಂಗವಾಗಿ ಸ್ಥಾಪಿಸಬಹುದು. ಉದಾ: ವಿಶ್ವ ಮಧುಮೇಹದ ದಿನಾಚರಣೆ<br>• ದತ್ತಿಯ ವಿಷಯವನ್ನು ಆಯ್ಕೆ ಮಾಡುವ ಮುಕ್ತ ಅವಕಾಶವನ್ನು ಬಳಗಕ್ಕೆ ನೀಡಬಹುದು. |
| ೦೪ | ದತ್ತಿನಿಧಿ ಇಡುಗಂಟು | • ದತ್ತಿನಿಧಿಯ ಸ್ಥಾಪನೆಗೆ ಅಗತ್ಯವಾದ ಇಡುಗಂಟಿನ ವಿವರಗಳು.<br>• ಎರಡು ವಿಧದ ಇಡುಗಂಟನ್ನು ಸ್ಥಾಪಿಸಬಹುದು.<br>೧. ದತ್ತಿ ಉಪನ್ಯಾಸ ಶಾಶ್ವತ ಇಡುಗಂಟು.<br>○ ಒಂದು ಸಲ ರೂ. ೧.೫ ಲಕ್ಷ ರೂಪಾಯಿಗಳ ಇಡುಗಂಟು |

DRAFT

| | | |
|---|---|---|
| | | ಅಥವ ಹೆಚ್ಚಿನ ಮೊತ್ತ.<br>○ ೧.೫ ಲಕ್ಷ ರೂಪಾಯಿಗಳನ್ನು ಠೇವಣಿಯಲ್ಲಿಟ್ಟು, ಬರುವ ಬಡ್ಡಿಯಿಂದ ಒಂದು ದತ್ತಿ ಉಪನ್ಯಾಸ ಸ್ಥಾಪನೆ<br>○ ಇದು ಪ್ರತಿ ವರ್ಷವು ನಡೆಯುತ್ತದೆ.<br>೨. ದತ್ತಿ ಉಪನ್ಯಾಸ ವಾರ್ಷಿಕ ಇಡುಗಂಟು<br>• ದತ್ತಿ ಉಪನ್ಯಾಸ ವಾರ್ಷಿಕ ಇಡುಗಂಟು ರೂ.೧೦,೦೦೦ ಅಥವ ಹೆಚ್ಚಿನ ಮೊತ್ತ.<br>• ಈ ಹಣವನ್ನು ನೀಡಿದ ವರ್ಷದಲ್ಲಿ ಒಂದು ದತ್ತಿಉಪನ್ಯಾಸವನ್ನು ಏರ್ಪಡಿಸುವುದು<br>• ದಾನಿಗಳು ಪ್ರತಿ ವರ್ಷವು ದತ್ತಿನಿಧಿಯನ್ನು ದಾನ ಮಾಡಬೇಕಾಗುತ್ತದೆ<br>• ಒಬ್ಬ ಸದಸ್ಯರು ಒಂದಕ್ಕಿಂತ ಹೆಚ್ಚಿನ ದತ್ತಿನಿಧಿಯನ್ನು ನೀಡಿ, ಹೆಚ್ಚು ದತ್ತಿ ಉಪನ್ಯಾಸಗಳನ್ನು ಸ್ಥಾಪಿಸಬಹುದು.<br>• ದಾನಿಗಳಿಂದ ಸಂಪೂರ್ಣ ಹಣ ಸಂದಾಯದ ನಂತರವೇ ದತ್ತಿ ಉಪನ್ಯಾಸ ಕಾರ್ಯಕ್ರಮಕ್ಕೆ ಅನುಮತಿ ನೀಡಲಾಗುವುದು. |
| ೦೫ | ದತ್ತಿನಿಧಿ ಸ್ವೀಕಾರ | • ದತ್ತಿ ಹಣವನ್ನು ಪಡೆದ ನಂತರ ದಾನಿಗೆ ಅಧಿಕೃತ ರಸೀದಿಯನ್ನು ನೀಡಬೇಕು<br>• ದತ್ತಿಸ್ವೀಕಾರದ ಬಗ್ಗೆ ದಾನಿಗೆ ಒಂದು ಪತ್ರವನ್ನು ಬರೆದು, ಪತ್ರದಲ್ಲಿ ಅಭಿನಂದನೆಯನ್ನು ಹಾಗೂ ಕೃತಜ್ಞತೆಯನ್ನು ಸೂಚಿಸಬೇಕು |
| ೦೬ | ದತ್ತಿನಿಧಿ ನಿರ್ವಹಣೆ | ದತ್ತಿನಿಧಿಯ ನಿರ್ವಹಣೆಯನ್ನು ಬಳಗದ ಪದಾಧಿಕಾರಿಗಳು (ಅಧ್ಯಕ್ಷರು ಮತ್ತು ಕೋಶಾಧಿಕಾರಿ) ನಿರ್ವಹಿಸಬೇಕು. |
| ೦೭ | ಆದಾಯ ತೆರಿಗೆ ವಿನಾಯತಿ | ಆದಾಯ ತೆರಿಗೆ ವಿನಾಯಿತಿ ಪ್ರಸ್ತುತ ಇರುವುದಿಲ್ಲ |
| ೦೮ | ಉಪನ್ಯಾಸದ ಸ್ಥಳ | • ದತ್ತಿ ಸ್ಥಾಪಕರು ಉಪನ್ಯಾಸವನ್ನು ನಿಗದಿತ ಭಾ.ವೈ.ಸಂ ಶಾಖೆಯವರು ನಡೆಸಬೇಕು ಎಂದು ಸೂಚಿಸಿದ್ದರೆ ಅದರಂತೆ ನಡೆದುಕೊಳ್ಳಬಹುದು.<br>• ಭಾ.ವೈ.ಸಂ ಯಾವುದೇ ಶಾಖೆಯು ತಾನು ದತ್ತಿ ಉಪನ್ಯಾಸವನ್ನು ನಡೆಸಲು ಆಸಕ್ತಿಯಿದ್ದಲ್ಲಿ ಅವರಿಗೆ ಅವಕಾಶ. ಮೊದಲು ಲಿಖಿತ ಮನವಿಯನ್ನು ಮಾಡಿದವರಿಗೆ ಆದ್ಯತೆ.<br>• ಬಳಗವೇ ಭಾ.ವೈ.ಸಂ ದ ನಿಗದಿತ ಶಾಖೆಗೆ ದತ್ತಿ ಉಪನ್ಯಾಸವನ್ನು ನಡೆಸುವಂತೆ ಪ್ರಾರ್ಥಿಸಬಹುದು. |
| ೦೯ | ಸಂಘ ಸಂಸ್ಥೆಗಳ ಸಹಯೋಗ | • ದತ್ತಿ ಉಪನ್ಯಾಸವನ್ನು ಅವಶ್ಯಕತೆಗೆ ಅನುಗುಣವಾಗಿ ಭಾರತೀಯ ವೈದ್ಯಕೀಯ ಸಂಘದ ಶಾಖೆಯ ಆವರಣದಲ್ಲಿ ಸ್ಥಳಗಳಲ್ಲಿ ನಡೆಸಬಹುದು. ಉದಾ: ಶಾಲೆಗಳು, ರೋಟರಿ, ಲಯನ್ಸ್ ಮುಂತಾದ |

DRAFT

| | | |
|---|---|---|
| | | ಸಂಘ ಸಂಸ್ಥೆಗಳು.<br>• ದತ್ತಿ ಉಪನ್ಯಾಸದಲ್ಲಿ ಭಾಗಿಯಾಗಲು ಸ್ಥಳೀಯ ಸಂಘ ಸಂಸ್ಥೆಗಳಿಗೆ ಅವಕಾಶವನ್ನು ನೀಡಬೇಕು.<br>• ಸಂಘ ಸಂಸ್ಥೆಗಳು ಉಪನ್ಯಾಸವನ್ನು ಕೇಳಲು ಅಗತ್ಯವಾದ ಜನರನ್ನು ಸಂಘಟಿಸಬೇಕು.<br>• ಉಪನ್ಯಾಸವನ್ನು ಮಾಡಲು ಅಗತ್ಯವಾದ ಅಂಗಳ, ಮೈಕ್, ಪ್ರೊಜೆಕ್ಟರ್, ಕುರ್ಚಿ ಇತ್ಯಾದಿಯ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು.<br>• ಪ್ರಚಾರ / ಆತಿಥ್ಯ / ಆರ್ಥಿಕ ನೆರವನ್ನು ನೀಡಿದರೆ, ಅದನ್ನು ಸ್ವೀಕರಿಸಬಹುದು.<br>• ಪ್ರಚಾರದಲ್ಲಿ ನಿಗದಿತ ಸಂಸ್ಥೆಯ ಹೆಸರ ಬಳಕೆಗೆ ಅವಕಾಶವನ್ನು ಮಾಡಿಕೊಡಬಹುದು |
| ೧೦ | ಉಪನ್ಯಾಸದ ವಿಷಯ | • ಸಾರ್ವಜನಿಕರಿಗೆ ಉಪಯುಕ್ತವಾಗಬಹುದಾದ ಯಾವುದೇ ವಿಷಯ.<br>• ದತ್ತಿ ಸ್ಥಾಪಕರು ನಿಗದಿತ ವಿಷಯವನ್ನು ಸೂಚಿಸಿದ್ದರೆ, ಅದರ ಪಾಲನೆ.<br>• ಆಯಾ ವರ್ಷ ವಿವಿಧ ಆರೋಗ್ಯ ದಿನಾಚರಣೆಗಳ ಅಂಗವಾಗಿ ಸರ್ಕಾರ/ಭಾ.ವೈ.ಸಂ ಕೇಂದ್ರ ಸೂಚಿಸಿದ ಶೀರ್ಷಿಕೆಗಳ ಆಯ್ಕೆ.<br>• ಭಾ.ವೈ.ಸಂ ಸದಸ್ಯರು/ಶಾಖೆಗಳು ಸೂಚಿಸಿದ ವಿಷಯ.<br>• ಬಳಗವು ಮುಂಗಡವಾಗಿ ಸಿದ್ಧಪಡಿಸಿಟ್ಟುಕೊಂಡಿರುವ ಸೂಕ್ತ ಉಪನ್ಯಾಸ ಶೀರ್ಷಿಕೆಗಳ ಪಟ್ಟಿ.<br>• ಕೆಲವು ಜನಪ್ರಿಯ ಉಪನ್ಯಾಸ ಶೀರ್ಷಿಕೆಗಳನ್ನು ಪುನರಾವರ್ತಿಸಲು ಅವಕಾಶವಿದೆ. |
| ೧೧ | ಉಪನ್ಯಾಸಕರ ಆಯ್ಕೆ | • ದತ್ತಿ ಸ್ಥಾಪಕರ ಸಲಹೆ ಮತ್ತು ಸ್ಥಳೀಯ ಶಾಖೆಯ ಸೂಚನೆಗಳನ್ನು ಪರಿಶೀಲಿಸಿ ಸಮಿತಿಯು ದತ್ತಿ ಉಪನ್ಯಾಸಕರನ್ನು ನಿರ್ಧರಿಸುವುದು. |
| ೧೨ | ಉಪನ್ಯಾಸದ ದಿನಾಂಕ | • ದತ್ತಿ ಸ್ಥಾಪಕರು ಸೂಚಿಸಿದ ದಿನ<br>• ಸಂಘ ಸಂಸ್ಥೆಗಳು ಸೂಚಿಸಿದ ದಿನ<br>• ವಿಶೇಷ ವೈದ್ಯಕೀಯ ದಿನಾಚರಣೆಯ ದಿನ ಅಥವಾ ಹಿಂದಿನ ದಿನ<br>• ಬಳಗವು ಸೂಚಿಸಿದ ದಿನ<br>• ದತ್ತಿ ಉಪನ್ಯಾಸಗಳ ಸಂಖ್ಯೆಯನ್ನಾಧರಿಸಿ, ಅವನ್ನು ಸಮರೂಪದಲ್ಲಿ ವಿತರಿಸುವುದು. ಉದಾ: ೧೨ ದತ್ತಿ ಉಪನ್ಯಾಸಗಳಿದ್ದರೆ, ತಿಂಗಳಿಗೊಂದು ಉಪನ್ಯಾಸವನ್ನು ಏರ್ಪಡಿಸುವುದು |
| ೧೩ | ಉಪನ್ಯಾಸ ವಿವರಗಳು | • ಉಪನ್ಯಾಸವು ಸದಾ ತಿಳಿಗನ್ನಡದಲ್ಲಿರಬೇಕು<br>• ಪವರ್ ಪಾಯಿಂಟ್ ಪ್ರೆಸೆಂಟೇಶನ್ ಇದ್ದರೆ ಉತ್ತಮ<br>• ಉಪನ್ಯಾಸದ ಲಿಖಿತ ರೂಪವನ್ನು ಮುದ್ರಿಸಿ / ಫೋಟೋಕಾಪಿಯ |

DRAFT

| | | |
|---|---|---|
| | | ಮೂಲಕ ವಿತರಿಸುವುದು ಸೂಕ್ತ<br>• ಭಾಷಣದ ಅವಧಿ: ಸುಮಾರು ೪೫ ನಿಮಿಷಗಳು<br>• ಪ್ರಶ್ನೋತ್ತರ ಅವಧಿ: ಸುಮಾರು ೪೫ ನಿಮಿಷಗಳು<br>• ಉಪನ್ಯಾಸದ ನೇರ ಪ್ರಸಾರ: ಯೂಟ್ಯೂಬ್ ಮತ್ತು ಫೇಸ್ ಬುಕ್.<br>• ದಾನಿಗಳು ಉಪನ್ಯಾಸದಲ್ಲಿ ಭಾಗವಹಿಸಲು ಕರೆಯೋಲೆ<br>• ಉಪನ್ಯಾಸದ ಆರಂಭದಲ್ಲಿ ದಾನಿಗಳ ಬಗ್ಗೆ ಸಂಕ್ಷಿಪ್ತ ವಿವರ ಮತ್ತು ಕೃತಜ್ಞತೆ. ಮೃತರ ಹೆಸರಿನಲ್ಲಿ ದತ್ತಿಯನ್ನು ಸ್ಥಾಪಿಸಿದ್ದರೆ ಅವರ ಚಿತ್ರಕ್ಕೆ ಗೌರವ.<br>• ದತ್ತಿ ಉಪನ್ಯಾಸ ಸಹಯೋಗಿ ಸಂಸ್ಥೆಗಳ ಪರಿಚಯ ಮತ್ತು ಕೃತಜ್ಞತೆ<br>• ಉಪನ್ಯಾಸಕರ ಸಂಕ್ಷಿಪ್ತ ಪರಿಚಯ ಮತ್ತು ಕೃತಜ್ಞತೆ<br>• ಸಮಿತಿಯ ಅಧ್ಯಕ್ಷರು ಅಥವಾ ಸದಸ್ಯರು ಅಥವಾ ವಲಯ ಸಂಯೋಜಕರು ಅಥವಾ ಅಧ್ಯಕ್ಷರು ಸೂಚಿಸಿದ ಸ್ಥಳೀಯ ಕನ್ನಡ ವೈದ್ಯ ಬರಹಗಾರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.<br>• ೫-೬ ಜಿಲ್ಲೆಗಳನ್ನು ಒಳಗೊಂಡ ವಲಯಗಳನ್ನು ಸಮಿತಿಯು ರಚಿಸಿ ಅವುಗಳ ಉಸ್ತುವಾರಿಯನ್ನು ಆಸಕ್ತಿ ಇರುವ ಕನ್ನಡ ವೈದ್ಯ ಬರಹಗಾರರಿಗೆ ವಹಿಸಿ ದತ್ತಿ ಉಪನ್ಯಾಸಗಳ ಮೇಲ್ವಿಚಾರಣೆ / ಉತ್ತೇಜನ ಮಾಡಲು ಪ್ರೇರೇಪಿಸಬೇಕು.<br>• ಬ್ಯಾನರ್ ನಲ್ಲಿ ಮತ್ತು ಪ್ರಶಸ್ತಿ ಪತ್ರದಲ್ಲಿ ಭಾರತೀಯ ವೈದ್ಯಕೀಯ ಸಂಘದ ಲಾಂಛನ, ಕನ್ನಡ ವೈದ್ಯ ಬರಹಗಾರರ ಲಾಂಛನ ಇರಬೇಕು. ಭಾಗವಹಿಸುವ ಸಂಘ ಸಂಸ್ಥೆಯ ಲಾಂಛನವನ್ನು ಹಾಕಬಹುದು.<br>• ಪ್ರಶಸ್ತಿ ಪತ್ರದಲ್ಲಿ ರಾಜ್ಯಾಧ್ಯಕ್ಷರ ಮತ್ತು ಸಮಿತಿಯ ಅಧ್ಯಕ್ಷರ ಸಹಿ ಇರಬೇಕು. |
| ೧೪ | ಉಪನ್ಯಾಸಕರಿಗೆ ಗೌರವ | • ಆಕರ್ಷಕ ಸ್ಮರಣಿಕೆ / ಪುಸ್ತಕಗಳ ಸಂಪುಟ. ಉದಾ: ಮಾಸ್ತಿಯವರ ಆತ್ಮಚರಿತ್ರೆ, 'ಭಾವ" ದ ಮೂರು ಸಂಪುಟಗಳು<br>• ಹಾರ, ಫಲ, ಶಾಲು, ಪೇಟ ಇತ್ಯಾದಿಗಳು ಕಡ್ಡಾಯವಲ್ಲ<br>• ದತ್ತಿನಿಧಿಯಿಂದ ಉಪನ್ಯಾಸಕರ ಊಟ, ವಸತಿ, ಪ್ರಯಾಣದ ಖರ್ಚಿನ ನಿಭಾವಣೆ.<br>• ಉಪನ್ಯಾಸಕರಿಗೆ ನಗದು ಪುರಸ್ಕಾರವಿಲ್ಲ<br>• ದತ್ತಿದಾನಿಗಳಿಗೆ, ಸಹಯೋಗಿ ಸಂಘ ಸಂಸ್ಥೆಗಳಿಗೆ ಗೌರವ ಸಮರ್ಪಣೆ<br>• ೧೦೦೦೦ ಕ್ಕಿಂತ ಹೆಚ್ಚಿನ ಖರ್ಚನ್ನು ಸ್ಥಳೀಯ ಸಂಘಟನೆ ವಹಿಸಬೇಕು. |
| ೧೫ | ಅರ್ಥಿಕ ನೆರವು | • ದತ್ತಿ ಉಪನ್ಯಾಸವನ್ನು ನಡೆಸುವ ಭಾ.ವೈ.ಸಂ ಶಾಖೆಯು, ಕಾರ್ಯಕ್ರಮದ ನಂತರ, ೨ ವಾರದೊಳಗೆ ಅಗತ್ಯವಾದ ಬಿಲ್ ಮತ್ತು |

DRAFT

| | | |
|---|---|---|
| | | ಇತರ ದಾಖಲೆಗಳ ಸಮೇತ ಬಳಗಕ್ಕೆ ಸಲ್ಲಿಸಬೇಕು.<br>• ಬಳಗವು ಲಭ್ಯ ದತ್ತಿನಿಧಿಯ ಮೊತ್ತವನ್ನು ಶಾಖೆಗೆ ವಿತರಿಸಬಹುದು. |
| ೧೬ | ದತ್ತಿ ಉಪನ್ಯಾಸ ಗ್ರಂಥ ಪ್ರಕಟಣೆ | • ತಮ್ಮ ಅವಧಿಯಲ್ಲಿ ಆಯೋಜಿಲಾಗುವ ಉಪನ್ಯಾಸಗಳ ಲೇಖನಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವ ಯೋಜನೆಯನ್ನು ಸಮಿತಿಯು ಮಾಡಬಹುದು.<br>• ಸಂಪಾದಕರನ್ನು ವರ್ಷದ ಆದಿಯಲ್ಲಿ ಆರಿಸಬೇಕು.<br>• ಅವರಿಗೆ ದತ್ತಿನಿಧಿ ಉಪನ್ಯಾಸಗಳ ಯೂಟ್ಯೂಬ್ ಲಿಂಕ್ / ಲಿಖಿತ ಭಾಷಣ / ಛಾಯಾಚಿತ್ರಗಳನ್ನು ಬಳಗವು ಒದಗಿಸಬೇಕು |
| | | |

## ಮಾದರಿ ಆಹ್ವಾನ ಪತ್ರಿಕೆ
## (ಭಾರತೀಯ ವೈದ್ಯಕೀಯ ಸಂಘ ಮತ್ತು ಕನ್ನಡ ವೈದ್ಯ ಬರಹಗಾರರ ಸಮಿತಿಯ ಲಾಂಛನಗಳು ಮೇಲಿರಬೇಕು)

**ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ರಾಜ್ಯ ಶಾಖೆಯ ಕನ್ನಡ ವೈದ್ಯ ಬರಹಗಾರರ ಸಮಿತಿ ಮತ್ತು ಭಾರತೀಯ ವೈದ್ಯಕೀಯ ಸಂಘ, _..ಶಾಖೆ ಮತ್ತು ___..ಸಂಘಟನೆಯ ಸಂಯುಕ್ತಾಶ್ರಯದಲ್ಲಿ**

**ದತ್ತಿ ಉಪನ್ಯಾಸ ಕಾರ್ಯಕ್ರಮ**

**_.___.ಪ್ರಾಯೋಜಿತ ದತ್ತಿ ಉಪನ್ಯಾಸ**

**ವಿಷಯ: ___________**

**ದತ್ತಿ ಉಪನ್ಯಾಸಕರು:_________..**

**ದತ್ತಿ ದಾನಿಗಳು_________..**

**ಅಧ್ಯಕ್ಷತೆ_____.**

**ಮುಖ್ಯ ಅತಿಥಿಗಳು: ಕನ್ನಡ ವೈದ್ಯ ಬರಹಗಾರರ ಸಮಿತಿಯ ಅಧ್ಯಕ್ಷರು ಅಥವಾ ಸದಸ್ಯರು ಅಥವಾ ವಲಯ ಸಂಯೋಜಕರು / ಸಮಿತಿಯ ಪರವಾಗಿ ಸೂಚಿಸಿದ ಕನ್ನಡ ವೈದ್ಯ ಬರಹಗಾರರು**

**ಗೌರವ ಅತಿಥಿಗಳು / ಇತರೆ (ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ)**

**ಸಮಯ: ದಿನಾಂಕ:_________.ಸ್ಥಳ______**

**ಇಂದ**

**ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಭಾರತೀಯ ವೈದ್ಯಕೀಯ ಸಂಘ, _____..ಶಾಖೆ**

**"ಭಾರತೀಯ ವೈದ್ಯಕೀಯ ಸಂಘ ಚಿರಾಯುವಾಗಲಿ"**

# ದತ್ತಿ ಉಪನ್ಯಾಸ ಮಾದರಿ ಗೌರವ ಪತ್ರ

**ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ರಾಜ್ಯ ಶಾಖೆ**

**ಕನ್ನಡ ವೈದ್ಯ ಬರಹಗಾರರ ಸಮಿತಿ**

## ದತ್ತಿ ಉಪನ್ಯಾಸ ಗೌರವ ಪತ್ರ

**ಡಾ / ಶ್ರೀ / ಶ್ರೀಮತಿ**_______ ಇವರು ಭಾರತೀಯ ವೈದ್ಯಕೀಯ ಸಂಘ, ಕನ್ನಡ ವೈದ್ಯ ಬರಹಗಾರರ ಸಮಿತಿ, ಭಾರತೀಯ ವೈದ್ಯಕೀಯ ಸಂಘ, ಶಾಖೆ ಮತ್ತು ..ಸಂಘಟನೆಯ ಸಂಯುಕ್ತಾಶ್ರಯದಲ್ಲಿ " " ಎಂಬ ವಿಷಯದ ಕುರಿತು " .. ಪ್ರಾಯೋಜಿತ ದತ್ತಿ ಉಪನ್ಯಾಸ" ವನ್ನು ನೀಡಿರುತ್ತಾರೆ.

**ಧನ್ಯವಾದಗಳೊಂದಿಗೆ ಈ ಗೌರವ ಪತ್ರ ಸಮರ್ಪಿಸಲಾಗಿದೆ**

**ಡಾ** ___________

ರಾಜ್ಯಾಧ್ಯಕ್ಷರು

ಭಾ ವೈ ಸಂಘ, ಕರ್ನಾಟಕ ರಾಜ್ಯ ಶಾಖೆ

**ಡಾ** ___________

ಅಧ್ಯಕ್ಷರು

ಕನ್ನಡ ವೈದ್ಯ ಬರಹಗಾರರ ಸಮಿತಿ

**ಡಾ** __________

ಸದಸ್ಯರು,

ಕನ್ನಡ ವೈದ್ಯ ಬರಹಗಾರರ ಸಮಿತಿ

**ಡಾ** ________

ಅಧ್ಯಕ್ಷರು,

ಭಾ ವೈ ಸಂಘ,